ಇದರಲ್ಲೆಲ್ಲಾ ತಾನು ಎಕ್ಸ್‌ಪರ್ಟ್ ಅಲ್ಲದಿದ್ದರೂ, ಹಿತ ಅನ್ನಿಸಿದ್ದು ನೆನಪಿದೆ. ಅಥವಾ ಮೂಗೊಳಗೆ ವಾಸನೆ ಹಿತವಾಗಿ ಸೇರಿತು ಅನ್ನಿಸುತ್ತೆ, ಅದು ನೆನಪಿದೆ. ಊದಾ ಬಣ್ಣದ ಚೂಡಿದಾರ್ ತೊಟ್ಟಿದ್ದಳು, ಅದು ಅವಳ ಮೈಯನ್ನು ಗಪ್ಪಗೆ ಅಪ್ಪಿ ಹಿಡಿದಿತ್ತು, ಅದು ನೆನಪಿದೆ. ಅಂದು ತನ್ನ ಪಕ್ಕ ಕುಳಿತಿದ್ದಳು. ಗಾಳಿಗೆ ಕೂದಲು ಹಾರುತ್ತಾ ತನ್ನ ಕೆನ್ನೆಗೆ ಮೃದುವಾಗಿ ಬಡಿಯುತಿತ್ತು, ಅದೂ ನೆನಪಿದೆ.

ಹೃದಯದೊಳಗೆ ಯಾರೋ ಕೈ ಹಾಕಿ ಬಟ್ಟೆ ಹಿಂಡಿದಂತೆ ಮುರುಟಿದಾಗಲೇ ತನಗೂ ಹೃದಯವಿರುವ ಅನುಭವವಾಗಿತ್ತು. ಜೊತೆಗೆ ಒಳಗೆಲ್ಲೋ ಒದ್ದೆ ಒದ್ದೆ, ಅವ್ಯಕ್ತ ಪುಳಕ, ಸಣ್ಣ ಕಂಪನ, ತನ್ನ ತುಟಿಯ ಮೇಲೆ ಒಂದೇ ಸಮನೆ ಲಾಸ್ಯವಾಡುತ್ತಿರುವ ಕೂದಲು, ತಾನು ಮುಖ ಸವರಿ ಹೋಗುತ್ತಿರುವ ಆ ನುಣುಪು ಕೂದಲಿಗೆ ಗುಟ್ಟಾಗಿ ಸಹಸ್ರ ಸಹಸ್ರ ಮುತ್ತುಗಳನ್ನು ದಯಪಾಲಿಸುತ್ತಾ ತದೇಕ ದೃಷ್ಟಿಯಿಂದ ಹೊರ ನೋಡುತ್ತಾ ಕಲ್ಲು ಬಂಡೆಯಂತೆ ಕುಳಿತಿದ್ದೆ. ಆಚೆ ರಸ್ತೆಯಲ್ಲಿ ಏನಿತ್ತೋ ಗೊತ್ತಿಲ್ಲ, ಎಲ್ಲಿಗೆ ಹೋಗುತ್ತಿದ್ದೆನೋ ಗೊತ್ತಿಲ್ಲ, ಜೊತೆಗೆ ಮತ್ತ್ಯಾರಿದ್ದರೋ ಗೊತ್ತಿಲ್ಲ. ತನ್ನ ಜೊತೆಯಿದ್ದದ್ದು ಅವಳು ಮತ್ತು ಅವಳ ಸ್ವಪ್ನಸದೃಶ ಕೂದಲು ಮತ್ತು ಹುಚ್ಚನಂತೆ ಅದನ್ನು ಗುಟ್ಟಾಗಿ ಚುಂಬಿಸುತ್ತಿರುವ ತಾನು. ಯಾವಾಗ ಅವಳು ಇಳಿದು ಹೋದಳೋ ಗೊತ್ತಿಲ್ಲ. ಸಟ್ಟನೆ ಯಾರದ್ದೋ ಮೈ ದುರ್ಗಂಧ ಆವರಿಸಿಕೊಂಡಾಗಲೇ ತಾನು ಇಳಿಯುವ ಸ್ಥಳ ಬಂದಿದೆಯೆನ್ನುವ ಅರಿವಾದದ್ದು.

ಆ ವಾಸನೆ ಹಾಗೇ ತನ್ನೊಳಗೆ ಇಳಿದುಹೋಗಿತ್ತು. ಪ್ರತಿದಿನ ಅದೇ ಹಂಬಲದಲ್ಲಿ, ಅದೇ ಹಾದಿಯಲ್ಲಿ, ಮತ್ತದೇ ಕ್ಯಾಬಿನಲ್ಲಿ, ಆಚೆ ರಸ್ತೆಗೆ ಕಣ್ಣು ನೆಟ್ಟು, ಹಾರುವ ಆ ನುಣುಪು ಕೂದಲನ್ನು ಆರ್ದ್ರವಾಗಿ ಪೂಸಿಸುತ್ತಾ, ಆಗೆಲ್ಲೋ ಜಿನುಗಿದ ಹನಿ ಕಣ್ಣೀರನ್ನು ಗಾಳಿಗೊಡ್ಡಿ, ಹೊಟ್ಟೆಯೊಳಗೆ ಹಾರಾಡಿದ ಅಸಂಖ್ಯ ಚಿಟ್ಟೆಗಳನ್ನು ತಟ್ಟಿ ಸಮಾಧಾನಿಸುತ್ತಾ ತಾನು ಕನಸಿನಲ್ಲೇ ಅದನ್ನು ನೇವರಿಸುತ್ತಿದ್ದೆ. ದಿನ, ವಾರ, ತಿಂಗಳು, ಕನಸಿನಲ್ಲಿ ತೇಲಿ ಹೋದ ದಿನಗಳು ಹಗುರ ಅರಳೆಯಾಗಿ ಅಗಸದಲ್ಲಿ ಬಿಳಿ ಚುಕ್ಕಿಯಾಗಿ ಹಾರಾಡುತ್ತಿದ್ದವು. ರಾತ್ರಿ ಮಿನುಗುವ ನಕ್ಷತ್ರವಾಗಿ ಕಣ್ಣು ಮಿಟುಕಿಸುತ್ತಿದ್ದವು.

ಅದೇ ವಾಸನೆ ಸ್ಪರ್ಶಕ್ಕೆ ದಾರಿ ಮಾಡಿಕೊಟ್ಟಿತು. ಅದೇ ಕಂಪನ, ಅವ್ಯಕ್ತ ಭಯ, ಅವಳ ಬೆಳ್ಳಗಿನ ದುಂಡು ಕೈಯನ್ನು ಹಿತವಾಗಿ ಬಳಸಿ ಅಂಗೈಯಲ್ಲಿ ಹಿಡಿದು ಗಂಟೆಗಟ್ಟಲೆ ಧ್ಯಾನಿಸುತ್ತಾ ಎತ್ತಲೋ ಕಣ್ಣು ನೆಟ್ಟು ಕುಳಿತಿದ್ದೆ. ಅದು ನಿಜಕ್ಕೂ ಕನಸಿನಲ್ಲಿ ಹಿಡಿದಿದ್ದೋ, ನನಸಿನಲ್ಲೋ ನೆನಪಿಲ್ಲ. ಒಂದು ಕ್ಷಣ ಸಂಧಿಸಿದ ಆ ದೃಢ ಕಣ್ಣುಗಳಲ್ಲಿ ತನ್ನ ಪ್ರತಿಬಿಂಬ ತೇಲಾಡುತ್ತಿದ್ದಂತೆ ಕಂಡು, ದಂಗು ಬಡಿದಿದ್ದು ನೆನಪಿದೆ. ಅವಳ ಸ್ಥಿರ ಕೆಂದುಟಿಯನ್ನು ಅದರುತ್ತಲೇ ಚುಂಬಿಸಿದ್ದೆನೆಂದು ನೆನಪು. ಒಂದು ಕ್ಷಣ ಮೈ ಜುಮ್ಮೆಂದಿತ್ತು. ದೇಹದ ಮೇಲಿದ್ದ ಸಹಸ್ರಾರು ರೋಮವೂ ನಿಮಿರಿ ನಿಂತಿದ್ದ ನೆನಪು. ಏಕೆಂದರೆ ಆ ನೆನಪಿಗೇ ಈಗಲೂ ಮೈ ಜುಮ್ಮೆನ್ನುತ್ತಿದೆ, ರೋಮ ನಿಮಿರುತ್ತಿದೆ. ಆ ಸ್ಪರ್ಶ ತಂಗಾಳಿಯಂತೆ ಹೊಟ್ಟೆಯೊಳಗೆ ಕಚಗುಳಿಯನ್ನಿಟ್ಟಿತ್ತು, ಆನಂತರ ರಕ್ತ ಇದ್ದಕ್ಕಿದಂತೇ ಚಲನೆ ಪಡೆದು ಊರ್ಧ್ವಮುಖದಲ್ಲಿ ಚಲಿಸಿ, ಮುಖವೆಲ್ಲಾ ಬಿಸಿಯಾಗಿದ್ದು ನೆನಪಿದೆ. ಕೆಂಪಗೆ ಕೆಂಡದಂತೆ ಸುಡುತ್ತಿದ್ದ ಮೈ, ಅವಳೇ ಬಟ್ಟೆ ತೆಗೆದಳೆಂದು ನೆನಪು.

ಅಬ್ಬಾ! ಅದೆಷ್ಟು ಸುಂದರವಾಗಿದ್ದಳು! ತಾನು ಅವಾಕ್ಕಾಗಿ ನಿಟ್ಟಿಸುತ್ತಿದ್ದೆಯೆಂದು ನೆನಪು. ಅದು ಕನಸೇ, ಭ್ರಮೆಯೇ? ಇಲ್ಲ, ವಾಸ್ತವವಿರಬೇಕು. ಏಕೆಂದರೆ ಮತ್ತೆ, ಮತ್ತೆ, ಮತ್ತೆ, ಮತ್ತೆ ದಿನಾ

